# ಸಾಮೀ ಎಸೆದ ಬೌನ್ಸರ್

'ನೀವು ನನ್ನನ್ನು ಕಾಲೂ ಅಂತ ಕರೆಯುತ್ತಿದ್ದಿರಿ. ಡ್ರೆಸಿಂಗ್ ರೂಮ್‌ನಲ್ಲಿ ಹೀಗೆ ಕರೆದಾಗಲೆಲ್ಲ ನಗುತ್ತಿದ್ದಿರಿ. ಆಗ ನನಗೆ ಇದು ನನ್ನ ಕರಿಯ ಬಣ್ಣದ ಕುರಿತ ಅವಹೇಳನ ಎಂದು ಗೊತ್ತಿರಲಿಲ್ಲ. ಏನೋ ತಮಾಷೆಯ ಶಬ್ದ, ಅದಕ್ಕೇ ಎಲ್ಲರೂ ನಗುತ್ತಿದ್ದಾರೆ ಅಂದುಕೊಂಡಿದ್ದೆ. ಆದರೆ ಆಮೇಲೆ ನನಗೆ ಇದೊಂದು ಅವಹೇಳನದ ಶಬ್ದ ಎಂದು ಗೊತ್ತಾಯಿತು. ಈಗ ಏನನ್ನುತ್ತೀರಿ? ನನ್ನನ್ನು ವೈಯಕ್ತಿಕವಾಗಿ ಸಂಪರ್ಕಿಸಿ ಕ್ಷಮೆ ಕೇಳುತ್ತೀರಾ?'

—ಇದು ಡ್ಯಾರೆನ್ ಸಾಮೀ ಹೈದರಾಬಾದ್ ಸನ್‌ರೈಸರ್ಸ್ ತಂಡದ ಸಹ ಆಟಗಾರರಿಗೆ ಕೇಳಿರುವ ಪ್ರಶ್ನೆ. 2013–14ರಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪಂದ್ಯಗಳಲ್ಲಿ ಸನ್‌ರೈಸರ್ಸ್ ಪರವಾಗಿ ಆಡಿದಾತ ಈ ಸಾಮೀ. ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡವನ್ನು ನಾಯಕನಾಗಿ ಮುನ್ನಡೆಸಿದ ಕ್ರಿಕೆಟಿಗ. ತನ್ನ ಆಲ್‌ರೌಂಡ್ ಆಟದಿಂದ ಜಗತ್ತಿನಾದ್ಯಂತ ಕ್ರಿಕೆಟ್‌ಪ್ರೇಮಿಗಳನ್ನು ರಂಜಿಸಿದಾತ.

'ಕಾಲೂ' ಎಂದರೆ ನಮ್ಮಲ್ಲಿ 'ಕರಿಯ' ಎಂದು ಕರೆದಂತೆ. ಅಮೆರಿಕದಲ್ಲಿ ಕರಿಯ ವ್ಯಕ್ತಿ ಜೇಮ್ಸ್ ಫ್ಲಾಯ್ಡ್‌ನ ದಾರುಣ ಕೊಲೆಯ ಬಳಿಕ ವಿಶ್ವದಾದ್ಯಂತ ಭುಗಿಲೆದ್ದಿರುವ ವರ್ಣಭೇಧ ವಿರೋಧಿ ಹೋರಾಟದ ಹಿನ್ನೆಲೆಯಲ್ಲಿ ಈಗ ಸಾಮೀಯ ಹೇಳಿಕೆಗೆ ಹೆಚ್ಚು ಮಹತ್ವ ಬಂದಿದೆ. ಸನ್‌ರೈಸರ್ಸ್ ತಂಡದ ಆಟಗಾರರು ಯಾರೂ ಈವರೆಗೆ ಇದಕ್ಕೆ ಪ್ರತಿಕ್ರಿಯೆ ನೀಡಿಲ್ಲ. ವೆಸ್ಟ್ ಇಂಡೀಸ್‌ನ ಇನ್ನೊಬ್ಬ ಸ್ಟಾರ್ ಆಟಗಾರ ಕ್ರಿಸ್ ಗೇಲ್ ಸಾಮೀಗೆ ಬೆಂಬಲ ನೀಡಿದ್ದಾರೆ. ಇವರಿಬ್ಬರೂ ಅಮೆರಿಕದಲ್ಲಿ ನಡೆದಿರುವ ಬಿಳಿಯರ ವರ್ಣಭೇಧ ನೀತಿಯನ್ನು ಕಟು ಮಾತುಗಳಲ್ಲಿ ಖಂಡಿಸಿದವರು. ಅದರ ಬೆನ್ನಲ್ಲೇ ಸಾಮೀಯ ಈ ಹೇಳಿಕೆ ಹೊರಬಿದ್ದಿದ್ದು ನಮ್ಮಲ್ಲೂ ಜಾಲತಾಣಗಳಲ್ಲಿ ಚರ್ಚೆ ಶುರುವಾಗಿದೆ.

'ದಕ್ಷಿಣ ಏಷ್ಯಾದ ದೇಶಗಳಲ್ಲಿ ಕಪ್ಪಗಿರುವವರನ್ನು ಕಾಲೂ ಎಂದು ಕರೆಯುವುದು ಸಾಮಾನ್ಯ. ಅಮೆರಿಕದ ವರ್ಣಭೇಧದ ಧೋರಣೆ ಇಲ್ಲಿ ಸಲ್ಲುವುದಿಲ್ಲ. ಇಲ್ಲಿ ದಪ್ಪಗಿರುವವರನ್ನು ಮೋಟೂ, ಎತ್ತರಕ್ಕೆ ಇರುವವರನ್ನು ಲಂಬೂ ಎಂದು ಕರೆದಂತೆಯೇ ಕಾಲೂ ಎನ್ನುವ ಶಬ್ದ ಬಳಕೆಯಾಗುತ್ತಿದೆ' ಎನ್ನುವ ವಾದವನ್ನು ಕೆಲವರು ಮುಂದಿಟ್ಟದ್ದಾರೆ.

ವರ್ಣಭೇಧದ ಧೋರಣೆ ಇಲ್ಲದೆಯೂ ಸಹ ಆಟಗಾರನೊಬ್ಬನನ್ನು ಕಾಲೂ ಎಂದು ಬಣ್ಣದ ಆಧಾರದಲ್ಲಿ ತಮಾಷೆ ಮಾಡುವುದು ಅಂತರರಾಷ್ಟ್ರೀಯ ಮಟ್ಟದಲ್ಲಿ ಕ್ರಿಕೆಟ್ ಆಡುತ್ತಿರುವ ಯಾರಿಗೂ ಶೋಭೆ ತರುವುದಿಲ್ಲ. ಮೈದಾನದಲ್ಲಿ ಅಥವಾ ಡ್ರೆಸಿಂಗ್ ರೂಮ್‌ನಲ್ಲಿ ಎತ್ತರಕ್ಕೆ ಇರುವವರನ್ನು 'ಏಯ್ ಲಂಬೂ' ಎಂದು ಕರೆಯುತ್ತೇವೆಯೆ? ಸಾಮೀ ಎತ್ತಿರುವ ಪ್ರಶ್ನೆ ಸರಿಯಾಗಿಯೇ ಇದೆ. ನಿಜಕ್ಕೂ ಆಗಿನ ಸನ್‌ರೈಸರ್ಸ್ ಸಹ ಆಟಗಾರರಿಗೆ ನಾಚಿಕೆ ಆಗಿದ್ದರೆ ಅವರು ಸಾಮೀ ಬಳಿ ಕ್ಷಮೆ ಕೇಳಬೇಕು.

ಸಾಮೀ ಜಂಟಲ್‌ಮನ್ ರೀತಿಯಲ್ಲೇ ಈ ಪ್ರಶ್ನೆಯನ್ನು ಎತ್ತಿದ್ದಾರೆ. ಯಾರ ಹೆಸರನ್ನೂ ಹೇಳಿಲ್ಲ. '2013ರಿಂದ ಈವರೆಗೆ ಯಾಕೆ ಸುಮ್ಮನಿದ್ದರು? ಆಗಲೇ ಏಕೆ ಪ್ರತಿಭಟಿಸಲಿಲ್ಲ?' ಎಂದು ಕೇಳುವವರೂ ಇದ್ದಾರೆ. ಅದಕ್ಕೆ ಉತ್ತರ ಸಾಮೀಯ ವಿಡಿಯೊ ಕ್ಲಿಪಿಂಗ್‌ನಲ್ಲಿದೆ. 'ಆಗ ಈ ಶಬ್ದದ ಅರ್ಥ ನನಗೆ ಗೊತ್ತಿರಲಿಲ್ಲ. ಅದ್ಯಾವುದೇ ಮರ್ಯಾದೆ ಉಳ್ಳ ಆದರೆ ತಮಾಷೆಯ ಶಬ್ದ ಅಂದುಕೊಂಡಿದ್ದೆ' ಎಂದಿದ್ದಾರೆ. ಯಾವುದೇ ಶಬ್ದವಾಗಲೀ, ಆಡುವಾತನಿಗೆ ಅವಹೇಳನದ ಉದ್ದೇಶ ಇಲ್ಲದಿದ್ದರೂ, ಆತನ ಧ್ವನಿಯಲ್ಲಿ ಸಹ ಆಟಗಾರನಿಗೆ ಕೀಳರಿಮೆ ಹುಟ್ಟಿಸುವ ಧೋರಣೆ ಇದ್ದರೂ ಅದು ಕ್ಷಮೆ ಯಾಚನೆಯನ್ನೇ ಬೇಡುತ್ತದೆ.




ವೆಸ್ಟ್‌ಇಂಡೀಸ್ ತಂಡ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತೀರಾ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತಿದ್ದಾಗ ಸಾಮೀ ನಾಯಕನಾಗಿ ಬಂದವರು. 2004ರಲ್ಲಿ ಐಸಿಸಿ ಚಾಂಪಿಯನ್ಸ್ ಕಪ್ ಗೆದ್ದು ಮೆರೆದಿದ್ದ ವೆಸ್ಟ್ ಇಂಡೀಸ್ ಆ ಬಳಿಕ ಎಂಟು ವರ್ಷಗಳ ಕಾಲ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಪ್ರಶಸ್ತಿಗಳ ಬರ ಎದುರಿಸಿತ್ತು. 2012ರಲ್ಲಿ ಸಾಮೀ ನಾಯಕತ್ವದಲ್ಲಿ ವೆಸ್ಟ್ ಇಂಡೀಸ್ ಟಿ20 ವಿಶ್ವಕಪ್ ಗೆದ್ದ ಸಂಭ್ರಮಿಸಿತು. ಬಳಿಕ 2016ರಲ್ಲೂ ವೆಸ್ಟ್‌ಇಂಡೀಸ್ ಟಿ20 ವಿಶ್ವಕಪ್ ಗೆದ್ದಾಗಲೂ ಇದೇ ಸಾಮೀ ನಾಯಕ. ವಿಶ್ವದಲ್ಲಿ ನಾಯಕನಾಗಿ ತನ್ನ ದೇಶಕ್ಕೆ ಎರಡು ಸಲ ಟಿ20 ವಿಶ್ವಕಪ್ ಗೆಲ್ಲಿಸಿಕೊಟ್ಟ ಏಕೈಕ ನಾಯಕ ಸಾಮೀ.

ಸಾಮೀ ಪಾಕಿಸ್ತಾನ ಕ್ರಿಕೆಟ್‌ನಲ್ಲೂ ಜನಪ್ರಿಯ. ಪಾಕಿಸ್ತಾನ ಸೂಪರ್ ಲೀಗ್‌ನಲ್ಲಿ ಪೇಷಾವರ್ ಝುಲ್ಮೀ ತಂಡದ ನಾಯಕನಾಗಿ 2017ರಿಂದ 2020ರವರೆಗೆ ಆಟವಾಡಿದ್ದಾರೆ. ಫಿಟ್‌ನೆಸ್ ಕಾರಣಕ್ಕೆ ನಿವೃತ್ತಿ ಹೊಂದಿದ ಬಳಿಕ ಈಗ ಅದೇ ತಂಡದ ಕೋಚ್ ಆಗಿದ್ದಾರೆ. ಕ್ರಿಕೆಟ್‌ಗೆ ಸಲ್ಲಿಸಿದ ಕೊಡುಗೆಗಾಗಿ ಪಾಕಿಸ್ತಾನದ ಅತ್ಯುನ್ನತ ನಾಗರಿಕ ಗೌರವ 'ನಿಶಾನ್ ಎ ಪಾಕಿಸ್ತಾನ್' ಕೂಡಾ ಅವರಿಗೆ ಪ್ರಕಟವಾಗಿದೆ. ಪಾಕಿಸ್ತಾನದ ಗೌರವ ನಾಗರಿಕತ್ವವನ್ನು ಕೊಡಲಾಗಿದೆ.

ಬಲಗೈ ಮಧ್ಯಮ ವೇಗಿ ಸಾಮೀ, ಟೆಸ್ಟ್‌ನಲ್ಲಿ 66ಕ್ಕೆ 7 ವಿಕೆಟ್ ಉರುಳಿಸಿದ್ದು ಮತ್ತು ಸೆಂಚುರಿ ಹೊಡೆದದ್ದು ನೆನಪಿಗೆ ಬರುವ ಸಾಧನೆಗಳು. ಏಕದಿನ ಪಂದ್ಯದಲ್ಲಿ 26ಕ್ಕೆ 4 ವಿಕೆಟ್ ಉರುಳಿಸಿದ್ದು ಈವರೆಗಿನ ಶ್ರೇಷ್ಠ ಸಾಧನೆ. ಈಗ ಸನ್‌ರೈಸರ್ಸ್‌ನ ಸಹ ಆಟಗಾರರ ವಿರುದ್ಧ ಎಸೆದಿರುವ ಬೌನ್ಸರ್‌ಗೆ ಉತ್ತರ ಹೇಳುವವರು ಯಾರು?

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65